**ಅಸಲು ದಾವ ಸಂಖ್ಯೆ: 686/2016**
**ಪಿ .ಡಬ್ಲೂ -2**

ದಿಃ 15.04.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಪಾಟೀ ಸವಾಲು ಶ್ರೀ ವೈ ಜಿ ಜಿ ರವರಿಂದಃ-**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಮರಾಠಿ ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀ ಎಸ್ ಎ ಬಿ ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ಪ್ರತಿವಾದಿಯ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.200/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

1. ನಾನು ಪಿ ಎಚ್ ಡಿ ವ್ಯಾಸಂಗ ಮಾಡಿರುತ್ತೇನೆ. ನಾನು ಮುಂಬೈನಲ್ಲಿ ಖಾಯಂ ಆಗಿ ವಾಸಮಾಡುತ್ತೇನೆ. ನಾನು ಬೆಳಗಾವಿಯ ವಡಗಾಂವನಲ್ಲಿ ವಾಸಮಾಡುತ್ತಿದ್ದೇನೆ ಎಂದು ತೋರಿಸಲು ನನ್ನ ಬಳಿ ಕ್ರಯಪತ್ರ ಇರುತ್ತದೆ. ನಾನು ಬೆಳಗಾವಿಯ ವಡಗಾಂವ ನಿವಾಸಿ ಎಂದು ತೋರಿಸಲು ನನ್ನ ಬಳಿ ಮತದಾರರ ಗುರುತಿನ ಚೀಟಿ ಇರುತ್ತದೆ. ಅದನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ನಾನು ಮುಂಬೈನ ಖಾಯಂ ನಿವಾಸಿಯಾಗಿದ್ದು, ವಡಗಾಂವಿಯ ನಿವಾಸಿ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

2. 1 ನೇ ವಾದಿ ನನ್ನ ತಂದೆ. ಈ ದಾವೆಯನ್ನು ನನ್ನ ತಂದೆ ಶಾಶ್ವತ ನಿರ್ಭಂಧಕಾಜ್ಞೆ ಕೋರಿ

ಪ್ರತಿವಾದಿಯರ ವಿರುದ್ಧ ಹೂಡಿರುತ್ತಾರೆ. ಈ ದಾವೆಯ ವಾದಪತ್ರದಲ್ಲಿನ ಎಲ್ಲ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ. ವಾದ ಪತ್ರವನ್ನು ತಯಾರಿಸಲು ನನ್ನ ತಂದೆ ಮಾಹಿತಿ ನೀಡಿದ್ದು, ಆ ಸಮಯದಲ್ಲಿ ನಾನು ಸಹ ಹಾಜರಿದ್ದೇನು. ನನ್ನ ತಂದೆಯವರು ವಕೀಲರಿಗೆ ಮಾಹಿತಿ ನೀಡುವಾಗ ನಾನು ಹಾಜರಿದ್ದೇನು ಎನ್ನುವ ಬಗ್ಗೆ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಈ ದಾವೆಯನ್ನು ಸಿಟಿಎಸ ನಂಬರ 1896 ಸಂಬಂಧ ಹೂಡಲಾಗಿದೆ. ಸಿಟಿಎಸ್ ನಂಬರ 1896 ರ ಪೂರ್ವಕ್ಕೆ ಸರ್ಕಾರಿ ಹಳ್ಳ, ಪಶ್ಚಿಮಕ್ಕೆ ಧಾಮಣೆ ರಸ್ತೆ, ಉತ್ತರಕ್ಕೆ ರಾಜಾರಾಮ ಪೋಳ ರವರ ಸ್ವತ್ತು ಹಾಗೂ ದಕ್ಷಿಣಕ್ಕೆ ಕದಮ ರವರ ಸ್ವತ್ತು.

3. ನಾವು ನಮ್ಮ ಸ್ವತ್ತಿನ ಸುತ್ತ ಕಂಪೌಂಡ ಹಾಕಲು ಪ್ರಾರಂಭಿಸಿದಾಗ ಪ್ರತಿವಾದಿಯರು ಸ್ವತ್ತಿನ ಉತ್ತರ ಹಾಗೂ ದಕ್ಷಿಣ ದಿಕ್ಕಿನಲ್ಲಿ ನಮಗೆ ತೊಂದರೆ ನೀಡಿದ್ದರಿಂದ ಈ ದಾವೆಯನ್ನು ಹೂಡಲಾಗಿದೆ. ಸ್ವತ್ತಿನ ಉತ್ತರ ದಿಕ್ಕಿನಲ್ಲಿ 1 ರಿಂದ 3 ನೇ ಪ್ರತಿವಾದಿಯರು ಹಾಗೂ ದಕ್ಷಿಣ ದಿಕ್ಕಿನಲ್ಲಿ 4 ನೇ ಪ್ರತಿವಾದಿ ಹಾಗೂ ಅವರ ಸಹೋದರ ತೊಂದರೆ ನೀಡಿರುತ್ತಾರೆ. ವಾದ ಪತ್ರದಲ್ಲಿ ಉತ್ತರ ದಿಕ್ಕಿನಲ್ಲಿ 1 ರಿಂದ 3 ನೇ ಪ್ರತಿವಾದಿಯರು ಹಾಗೂ ದಕ್ಷಿಣ ದಿಕ್ಕಿನಲ್ಲಿ 4 ನೇ ಪ್ರತಿವಾದಿ ಹಾಗೂ ಅವರ ಸಹೋದರ ತೊಂದರೆ ನೀಡಿರುತ್ತಾರೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ.

4. 1 ರಿಂದ 3 ನೇ ಪ್ರತಿವಾದಿಯರು ಉತ್ತರ ದಿಕ್ಕಿನಲ್ಲಿ 2.5 ಅಡಿ ಹಾಗೂ 4 ನೇ ಪ್ರತಿವಾದಿ 2.5 ಅಡಿ ದಕ್ಷಿಣ ದಿಕ್ಕಿನಲ್ಲಿ ಬಿಟ್ಟುಕೊಡಿ ಎಂದು ನಮಗೆ ತೊಂದರೆ ನೀಡಿರುತ್ತಾರೆ. ಸದರಿ ಈಗ ಹೇಳಿದ ವಿಚಾರವನ್ನು ವಾದ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಉತ್ತರ

ದಿಕ್ಕಿನ 2.5 ಅಡಿ ಯಲ್ಲಿ 1 ರಿಂದ 3 ನೇ ಪ್ರತಿವಾದಿಯರು ಹಾಗೂ ದಕ್ಷಿಣ ದಿಕ್ಕಿನ 2.5 ಅಡಿಯಲ್ಲಿ 4 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ದಾವೆಯನ್ನು ಹೂಡುವಾಗ ದಾವಾ ಸ್ವತ್ತಿನ ಫೋಟೋಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

5. ಸದರಿ ಉತ್ತರ ದಿಕ್ಕಿನ 2.5 ಅಡಿ ಜಾಗದಲ್ಲಿ 1 ರಿಂದ 3 ನೇ ಪ್ರತಿವಾದಿಯರು ಬಾತರೂಮ್ ಹಾಗೂ toilet ನಿರ್ಮಾಣ ಮಾಡಿದ್ದು, ದಕ್ಷಿಣ ದಿಕ್ಕಿನ 2.5 ಅಡಿ ಜಾಗದಲ್ಲಿ 4 ನೇ ಪ್ರತಿವಾದಿ ಬಾತರೂಮ್ ಹಾಗೂ toilet ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸರಿಯಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ 2 ರಿಂದ 4 ನೇ ಪ್ರತಿವಾದಿಯವರು ಇದ್ದಾರೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**